# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಶ್ರೀ ಡಿ.ಸಿ. ಕೋರಿ. ಸಹಾಯಕ ಕೃಷಿ ಅಧಿಕಾರಿ,ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಹಾನಗಲ್ ಇವರಿಗೆ ಸ್ವ-ಇಚ್ಚಾ ನಿವೃತ್ತಿ ಹೊಂದಲು ಅನುಮತಿ ನೀಡುವ ಕುರಿತು.

****

ಓದಲಾಗಿದೆ:-

[1] ಕೃಷಿ ಆಯುಕ್ತರ ಪತ್ರ ಸಂ. ಕೃಇಸಿ-1/ಸಕೃಅ-2/ಸ್ವಇನಿ/55/09-10, ದಿನಾಂಕ: 22-02-2011 ಮತ್ತು ದಿನಾಂಕ: 27-05-2011.

ಪ್ರಸ್ತಾವನೆ:-

ಮೇಲೆ ಕ್ರ.ಸಂ.[1]ರಲ್ಲಿ ಓದಲಾದ ಪತ್ರಗಳಲ್ಲಿ ಕೃಷಿ ಆಯುಕ್ತರು, ಶ್ರೀ. ಡಿ.ಸಿ. ಕೋರಿ, ಸಹಾಯಕ ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಹಾನಗಲ್ ಹಾವೇರಿ ಜಿಲ್ಲೆ. ಇವರು ಅನಾರೋಗ್ಯದ ಕಾರಣಗಳಿಗಾಗಿ, ದಿನಾಂಕ: 31-04-2011ರ ಅಪರಾಹ್ನದಿಂದ ಜಾರಿಗೆ ಬರುವಂತೆ ಸ್ವ-ಇಚ್ಚಾ ನಿವೃತ್ತಿ ಹೊಂದಲು ಅರ್ಜಿ ಸಲ್ಲಿಸಿದ್ದು, ಅವರ ಅರ್ಜಿಯನ್ನು ಪರಿಶೀಲಿಸಲಾಗಿ, ಸದರಿ ಅಧಿಕಾರಿಯವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲ. ಹಾಗೂ ಇವರು ಸರ್ಕಾರದಿಂದ ಯಾವುದೇ ರೀತಿಯ ಮುಂಗಡ ಪಡೆದುಕೊಂಡಿಲ್ಲವೆಂದು, ಮತ್ತು ಇವರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಯಾವುದು ಇರುವುದಿಲ್ಲವೆಂದು, ಅವರು ಇಲ್ಲಿಯವರೆಗೆ ಸೇವೆ ಸಲ್ಲಿಸಿರುವ ಕಚೇರಿಗಳಿಂದ ಧೃಡಿಕರಿಸಿರುತ್ತಾರೆಂದು ವರದಿ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ಅಲ್ಲದೇ ಸದರಿ ಅಧಿಕಾರಿಯವರಿಂದ ಸರ್ಕಾರಕ್ಕೇನಾದರೂ ಬಾಕಿ ಬರಬೇಕಾದಲ್ಲಿ ಅದನ್ನು ಅವರ ನಿವೃತ್ತಿ ಉಪಲಬ್ಧಿಗಳಿಂದ ಕಟಾಯಿಸಲು ಅವರು ಮುಚ್ಚಳಿಕೆ ಪತ್ರ ಬರೆದುಕೊಟ್ಟಿರುತ್ತಾರೆಂದು ಸಹ ತಿಳಿಸಿ, ಅವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 285 [2] ಪ್ರಕಾರ ಸರ್ಕಾರಿ ಸೇವೆಯಿಂದ ಸ್ವ-ಇಚ್ಚಾ ನಿವೃತ್ತಿ ಹೊಂದಲು ಅನುಮತಿ ನೀಡಬೇಕೆಂದು, ಕೃಷಿ ಆಯುಕ್ತರು ಕೋರಿರುತ್ತಾರೆ.

ಕೃಷಿ ಆಯುಕ್ತರು ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಶ್ರೀ. ಡಿ.ಸಿ. ಕೋರಿ, ಸಹಾಯಕ ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಹಾನಗಲ್ ಹಾವೇರಿ ಜಿಲ್ಲೆ ಇವರಿಗೆ ದಿನಾಂಕ: 31-07-2011ರ ಅಪರಾಹ್ನದಿಂದ ಜಾರಿಗೆ ಬರುವಂತೆ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 69 ಕೃಪಸೇ 2011.**

**ಬೆಂಗಳೂರು, ದಿನಾಂಕ: 22-07-2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀ. ಡಿ. ಸಿ. ಕೋರಿ, ಸಹಾಯಕ ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಹಾನಗಲ್, ಹಾವೇರಿ ಜಿಲ್ಲೆ , ಇವರಿಂದ

ಮುಂದಿನ ಪುಟಕ್ಕೆ....

ಸರ್ಕಾರಕ್ಕೆನಾದರೂ ಬರಬೇಕಾದ **ಬಾಕಿ** ಇದ್ದಲ್ಲಿ, ಅದನ್ನು ಅವರ ನಿವೃತ್ತಿಯ ಉಪಲಬ್ಧಿಯಿಂದ ಕಟಾಯಿಸುವ ಷರತ್ತಿನೊಂದಿಗೆ **ಅವರಿಗೆ** ದಿನಾಂಕ: 31-07-2011ರ ಅಪರಾಹ್ನದಿಂದ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ **ಸೇವಾ** ನಿಯಮಾವಳಿ ನಿಯಮ 285[2] ರ ಪ್ರಕಾರ ಸ್ವಯಂ-ನಿವೃತ್ತಿ ಹೊಂದಲು **ಅನುಮತಿ** ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

Mnpatil 22/7/11
(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1] ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.

2] ಆಯುಕ್ತರು ಕೃಷಿ ಇಲಾಖೆ, **ಬೆಂಗಳೂರು**.(ಮೂಲ ಸೇವಾ ಪುಸ್ತಕದೊಂದಿರೆ, ರಿಜಿಸ್ಟ್ರೀ ಅಂಚೆ ಅಥವಾ ಮುದ್ದಾಮ ಮೂಲಕ)

3] ಜಂಟಿ ಕೃಷಿ ನಿರ್ದೇಶಕರು, **ಹಾವೇರಿ** ಹಾವೇರಿ ಜಿಲ್ಲೆ.

4] ಸಹಾಯಕ ಕೃಷಿ ನಿರ್ದೇಶಕರು, ಹಾನಗಲ್ ಹಾವೇರಿ ಜಿಲ್ಲೆ.

5) ಸರ್ಕಾರದ ಕಾರ್ಯದರ್ಶಿ, **ಕೃಷಿ ಇಲಾಖೆ** ಅವರ ಆಪ್ತ ಕಾರ್ಯದರ್ಶಿಯವರಿಗೆ.

6] ಸಂಬಂಧಪಟ್ಟ ಅಧಿಕಾರಿಯ**ವರಿಗೆ**

7] ಶಾಖಾ ರಕ್ಷಾ ಕಡತ/ಹೆಚ್ಚುವರಿ **ಪ್ರತಿಗಳು**.